ವಿಷಯ : ಟೂಲ್ ರೂಮ್ ಟ್ರೈನಿಂಗ್ ಸೆಂಟರ್‌ನ ಸ್ಥಾಪನೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 166(434)

ಶ್ರೀ ಡಿ.ಆರ್.ಪಾಟೀಲ್ (ಗದಾಗ್) :- ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಗದಗ್‌ದಲ್ಲಿ ಸರ್ಕಾರಿ ಟೂಲ್ ರೂಮ್ ಟ್ರೈನಿಂಗ್ ಸೆಂಟರ್‌ನ ಒಂದು ಸಂಸ್ಥೆಯನ್ನು ಪ್ರಾರಂಭಿಸುವ ಬೇಡಿಕೆ ಯಾವ ಹಂತದಲ್ಲಿದೆ.

ಆ) ಇದನ್ನು ಪ್ರಾರಂಭಿಸಲು ಸರ್ಕಾರ ಮಂಜೂರಾತಿ ನೀಡುವುದೇ;

ಶ್ರೀ.ಎಂ.ಮಲ್ಲಿಕಾರ್ಜುನ ಖರ್ಗೆ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಮಂತ್ರಿಗಳು):-

ಅ) ಗದಗನಲ್ಲಿ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾಪನೆ ಈ ತನಕ ಸರ್ಕಾರದ ಮುಂದೆ ಇಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ : ಸಾಲದ ಮೇಲೆ ನೋಂದಣಿ ಶುಲ್ಕ ವಿಧಿಸುತ್ತಿರುವ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 167 (727)

ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು), ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರೈತರು ಬ್ಯಾಂಕುಗಳಿಂದ ಪಡೆಯುತ್ತಿರುವ ಸಾಲದ ಮೇಲೆ ಸ್ಟ್ಯಾಂಪ್ ಶುಲ್ಕ ಯಾವ ರೀತಿ ವಿಧಿಸಲಾಗುತ್ತಿದೆ ;

ಅ) ಬೇರೆ ಕ್ಷೇತ್ರಕ್ಕೆ ಕೊಡುವ ಸಾಲಕ್ಕೆ ಇಂಥದ್ದೇ ಶುಲ್ಕ ವಿಧಿಸಲಾಗುತ್ತಿದೆಯೇ

ಇ) ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು)

ಅ) ರೂ.50,000-00 ರವರೆಗಿನ ಸಾಲಕ್ಕೆ ಮುದ್ರಾಂಕ ಶುಲ್ಕ ವಿನಾಯ್ತಿ ಇದೆ. ರೂ.50,000-00 ಗಳಿಗೂ ಮೇಲ್ಪಟ್ಟ ಸಾಲದ ಮೊತ್ತಕ್ಕೆ ಮಾತ್ರ ಮುದ್ರಾಂಕ ಶುಲ್ಕ ವಿಧಿಸಲಾಗುತ್ತಿದೆ.

ಆ) ಇಲ್ಲ. ಬೇರೆ-ಬೇರೆ ಕ್ಷೇತ್ರಗಳಲ್ಲಿ ಕೊಡುವ ಸಾಲಕ್ಕೆ ಸಂಬಂಧಿಸಿದಂತೆ ವಿವಿಧ ಆದೇಶಗಳು ಅನ್ವಯಿಸುತ್ತವೆ. ಕರ್ನಾಟಕ ರಾಜ್ಯದ ಅಭಿವೃದ್ಧಿ ಹೊಂದಿದ ಪ್ರದೇಶಗಳನ್ನು ಹೊರತುಪಡಿಸಿ, ಇತರೆ ಯಾವುದೇ ಪ್ರದೇಶದಲ್ಲಿ ಎಲ್ಲಾ ಸಣ್ಣ ಮತ್ತು ಅತಿಸಣ್ಣ ಹೊಸ ಕೈಗಾರಿಕೆಗಳಿಗೆ, ವಿಸ್ತರಣೆ, ನವೀಕರಣ ಹಾಗೂ ವೈವಿದ್ಧೀಕರಣಕ್ಕೆ ರಾಜ್ಯಸರ್ಕಾರದಿಂದ ಅಥವಾ ಸರ್ಕಾರದಿಂದ ಅಂಗೀಕೃತವಾದ ಸಂಸ್ಥೆಗಳಿಂದ ಪಡೆಯುವ ಸಾಲಕ್ಕೆ ಬರೆದುಕೊಡುವ ಆಧಾರ

ಪತ್ರಗಳಿಗೆ, ಹಂಚಿಕೆಯಾಗುವ ಕೈಗಾರಿಕಾ ಪ್ಲಾಟುಗಳು, ವರ್ಕ್ಸ್ ಪೆಡ್ಡುಗಳಿಗೆ ಬರೆದುಕೊಡುವ ಲೀಸ್,ಲೀಸ್ -ಕಂ-ಸೇಲ್ ಮತ್ತು ಶುದ್ಧ ಕ್ರಯಪತ್ರಗಳಿಗೆ ಮುದ್ರಾಂಕ ಶುಲ್ಕ ವಿನಾಯ್ತಿಯನ್ನು ಸಂಖ್ಯೆ. ಕಂಇ 164 ಇಎಸ್ಆರ್ 93, ದಿನಾಂಕ : 1-1-19994 ರ ಆದೇಶದಡಿಯಲ್ಲಿ ನೀಡಿರುತ್ತದೆ. ಹಾಗೆ ವಿನಾಯ್ತಿ ನೀಡುವಾಗ ಸಾಲದ ಹಣದ ಬಗ್ಗೆ ಯಾವುದೇ ಮಿತಿಯನ್ನು ನಿಗಧಿಪಡಿಸಿಲ್ಲ.

ಇ) ಬೇರೆ-ಬೇರೆ ಕ್ಷೇತ್ರಗಳಿಗೆ, ಆಯಾ ಕ್ಷೇತ್ರದ ಪ್ರಾಮುಖತೆ ಮತ್ತು ವಿನಾಯ್ತಿ ಕೊಟ್ಟಾಗ, ಸಂಪನ್ಮೂಲದ ಮೇಲೆ ಆಗಬಹುದಾದ ಪರಿಣಾಮಗಳನ್ನು ಗಮನದಲ್ಲಿಟ್ಟುಕೊಂಡು, ಸಾರ್ವಜನಿಕ ಹಿತದೃಷ್ಟಿಯಿಂದ ಬೇರೆ ಬೇರೆ ರೀತಿಯ ವಿನಾಯ್ತಿ ನೀಡಿದೆ.

ವಿಷಯ : ರಾಜ್ಯದಲ್ಲಿ ಅಬಕಾರಿ ಸಗಟು ಗುತ್ತಿಗೆ ದಾರರ ಸಂಖ್ಯೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 171 (425)

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) ಮಾನ್ಯ ಅಬಕಾರಿ ರಾಜ್ಯ ಸಚಿವರು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿ ಅಬಕಾರಿ ನಗದು ಲೈಸನ್ಸ್ ಹೊಂದಿರುವ ಗುತ್ತಿಗೆದಾರರ ಸಂಖ್ಯೆ ಎಷ್ಟು (ಗುತ್ತಿಗೆ ಪಡೆದವರ ಹೆಸರು ವಿವರಗಳನ್ನು ಜಿಲ್ಲಾವಾರು ಅಂಕಿ ಅಂಶಗಳಲ್ಲಿ ಒದಗಿಸುವುದು)

ಆ) ಇವುಗಳ ಪೈಕಿ ಎಷ್ಟುಜನರ ಗುತ್ತಿಗೆಯ ಪರವಾನಗಿಯನ್ನು ನವೀಕರಿಸಲಾಗಿದೆ. ?

ಇ) ನವೀಕರಿಸಲ್ಪಟ್ಟ ಎಷ್ಟು ಜನ ಸಗಟು ಗುತ್ತಿಗೆದಾರರಿಂದ ಅಬಕಾರಿ ಇಲಾಖೆಗೆ ಬಾಕಿ ಬರಬೇಕಾಗಿರುವ ಮೊತ್ತವೆಷ್ಟು?

ಈ) ಎಷ್ಟು ವರ್ಷಗಳಿಂದ ಇವರುಗಳಿಂದ ಬಾಕಿ ಬರಬೇಕಾಗಿದೆ.

ಉ) ಕೆಲವು ಪ್ರತಿಷ್ಠಿತ ಗುತ್ತಿಗೆದಾರರಿಂದ ಬಾಕಿ ಬೇಕಾಗಿದ್ದರೂ ಸಹ ಅವರ ಪರವಾನಿಗಿಯನ್ನು ನವೀಕರಿಸುವುದು ನಿಜವೇ?

ಊ) ಅಬಕಾರಿ ಇಲಾಖೆ ಸಗಟು ಗುತ್ತಿಗೆದಾರರ ಪರವಾನಿಗಿಯನ್ನು ನವೀಕರಿಸುವುದರಲ್ಲಿ ತಾರತಮ್ಯ ತೋರುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ?

ಋ) ಮುಂಬರುವ ವರ್ಷಗಳಲ್ಲಿ ಈ ತಾರತಮ್ಯವನ್ನು ಹೋಗಲಾಡಿಸಲು ಸರ್ಕಾರ ಕಟ್ಟುನಿಟ್ಟಿನ ಕ್ರಮಗಳನ್ನು ಅನುಸರಿಸುವುದೇ?

ಶ್ರೀ ರಮಾನಾಥ್ ರೈ

(ಅಬಕಾರಿ ರಾಜ್ಯ ಸಚಿವರು)

ಅ) 363, ವಿವರಗಳನ್ನು ಅನುಬಂಧ - 1 ರಲ್ಲಿ ಒದಗಿಸಲಾಗಿದೆ.

ಆ) 363 ಸನ್ನದುಗಳನ್ನು ಕೊಡಲಾಗಿದೆ.